**ದಿನಾಂಕಃ 09-08-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಪಿ.ಆರ್.ಕೆ. ವಕೀಲರಿಂದಃ**

ನನ್ನ ಅಜ್ಜ ರಾಮಪ್ಪ ಎಂದರೆ ಸರಿ. ನನ್ನ ತಂದೆ ಹನುಮಂತಪ್ಪ ಎಂದರೆ ಸರಿ. ನನ್ನ ತಂದೆ ಹನುಮಂತಪ್ಪ 1995 ರಲ್ಲಿ ಹೂಲಿಕಟ್ಟಿ ಗ್ರಾಮದಲ್ಲಿ ಮೃತಪಟ್ಟಿರುತ್ತಾರೆ. ನಮ್ಮ ಮನೆಯಲ್ಲಿ ನಾನು, ನನ್ನ ಅಣ್ಣ ಹಾಗೂ ಮೃತನ ಹೆಂಡತಿ ಹಾಗೂ ಅಣ್ಣನ ಮಕ್ಕಳು. ನನ್ನ ಅಣ್ಣ ಎಂದರೆ ಬಸವರಾಜ ಎಲ್ಲರೂ ಇದ್ದೇವೆ. ನಾವೇಲ್ಲರೂ ಹೂಲಿಕಟ್ಟಿ ಗ್ರಾಮದಲ್ಲಿರುವ ಬೀರಪ್ಪನ ಗುಡಿ ಹತ್ತಿರ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇವೆ. ನಾವೇಲ್ಲರೂ 35 ವರ್ಷಗಳಿಂದಲೂ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತೇವೆ. ರಂಗಪ್ಪ ಅಂದರೆ ಪ್ರತಿವಾದಿ ಎಲ್ಲಿ ವಾಸವಾಗಿದ್ದಾರೆ ಎಂದರೆ ಹೂಲಿಕಟ್ಟಿಯಲ್ಲಿರುವ ನಮ್ಮ ಅಜ್ಜನ ಮನೆಯಲ್ಲಿ ವಾಸವಾಗಿದ್ದಾನೆ. ಆ ಮನೆಯಲ್ಲಿ ಪ್ರತಿವಾದಿ ಹಾಗೂ ಆತನ ಸೊಸೆ ಹಾಗೂ ಮೊಮ್ಮಕ್ಕಳು ವಾಸವಾಗಿದ್ದಾರೆ. ಪ್ರತಿವಾದಿಯ ಬಳಿ ಟ್ರಾಕ್ಟರ್ ಇತ್ತಾ ಎಂದರೆ ಇತ್ತು ಈಗ ಇರುವುದಿಲ್ಲ.

2. ನನ್ನ ಅಜ್ಜ ರಾಮಪ್ಪನಿಂದ ನನ್ನ ತಂದೆಗಾಗಲೀ ಅಥವಾ ಪ್ರತಿವಾದಿಗಾಗಲೀ ಯಾವ ಯಾವ ಆಸ್ತಿಗಳು ಬಂದಿವೆ ಎಂದರೆ ಯಾವ ಆಸ್ತಿಗಳು ಬಂದಿಲ್ಲ. ಸರ್ವೆ ನಂ.104/10 ರಲ್ಲಿ ವಿಸ್ತೀರ್ಣ 6 ಎಕರೆ 6 ಗುಂಟೆ ಇದೆ ಎಂದರೆ ನಿಜ. ಈ ಆಸ್ತಿ ಮೊದಲಿಗೆ ಶಿವಪ್ಪ ಶಿದ್ದಪ್ಪ ಕುರುಬರ ಇವರಿಗೆ ಸೇರಿತ್ತು ಎಂದರೆ ಸರಿಯಲ್ಲ. ಸರ್ವೆ ನಂ.104/10 ರಲ್ಲಿ ವಿಸ್ತೀರ್ಣ 6 ಎಕರೆ 6 ಗುಂಟೆ ಆಸ್ತಿಯನ್ನು ಪ್ರತಿವಾದಿ ರಂಗಪ್ಪ ದಿನಾಂಕ 13-07-1966 ರಲ್ಲಿ ಶಿವಪ್ಪ ಶಿದ್ದಪ್ಪ ಕುರುಬರ ರವರಿಂದ ನೊಂದಾಯಿತ ಕ್ರಯ ಪತ್ರದ ಮೂಲಕ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.51/2 ರಲ್ಲಿ ವಿಸ್ತೀರ್ಣ 8 ಎಕರೆ 7 ಗುಂಟೆ ಆಸ್ತಿಯ ಕುರಿತು ಲ್ಯಾಂಡ್ ಟ್ರಿಬುನಲ್ ನಲ್ಲಿ ಆಗಿರುವ ವಿಚಾರಣೆಗಳ ಬಗ್ಗೆ ಗೊತ್ತಿದೆಯಾ ಎಂದರೆ ಇಲ್ಲ. ಲ್ಯಾಂಡ್ ಟ್ರಿಬುನಲ್ ಗೆ ಯಾರು ಅರ್ಜಿ ಸಲ್ಲಿಸಿದ್ದರು, ಯಾರಿಗೆ ಮಂಜೂರು ಆಗಿದೆ ಎಂದು ಗೊತ್ತಿದೆಯಾ ಎಂದರೆ ರಾಮಪ್ಪ ಮತ್ತು ನಾಗಪ್ಪ ರವರಿಗೆ ಮಂಜೂರು ಆಗಿರುತ್ತದೆ. ಯಾವ ದಿನಾಂಕದಂದು ಮಂಜೂರು ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.51/2 ರಲ್ಲಿ ವಿಸ್ತೀರ್ಣ 8 ಎಕರೆ 7 ಗುಂಟೆ ಆಸ್ತಿ ಪ್ರತಿವಾದಿ ರಂಗಪ್ಪನಿಗೆ ಲ್ಯಾಂಡ್ ಟ್ರಿಬುನಲ್ ನಿಂದ ಮಂಜೂರು ಆಗಿತ್ತು ಎಂದರೆ ನಿಜ.

3. ಸದರಿ ಆಸ್ತಿ ಮಂಜೂರು ಆದ ನಂತರ ಎರಡೂ ಆಸ್ತಿಗಳ ಕುರಿತು ನನ್ನ ಹೆಸರಿನ್ನು ದಾಖಲು ಮಾಡಿ ಎಂದು ನನ್ನ ತಂದೆ ತಹಶೀಲ್ದಾರರಿಗೆ ಅರ್ಜಿ ಕೊಟ್ಟು ಪ್ರತಿವಾದಿಯ ಜೊತೆ

ಜಂಟಿಯಾಗಿ ದಾಖಲು ಮಾಡಿಸಿಕೊಂಡಿದ್ದರು ಎಂದರೆ ನಿಜ. ಸದರಿ ಜಮೀನುಗಳ ಕುರಿತು ತಹಶೀಲ್ದಾರ, ಎಸಿ ಮತ್ತು ಡಿಸಿ ನ್ಯಾಯಾಲಯಗಳಲ್ಲಿ ಪ್ರಕರಣಗಳು ದಾಖಲಾಗಿ ವಿಚಾರಣೆಗಳು ನಡೆಯಿತು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.51/2 ರಲ್ಲಿ 8 ಎಕರೆ 7 ಗುಂಟೆಗೆ ಸಂಬಂದಪಟ್ಟಂತೆ ನಾನು ಹಾಗೂ ನನ್ನ ಅಣ್ಣ ತಮ್ಮಂದಿರುವ ಎಲ್ಲರೂ ಸೇರಿ ಅರ್ಜಿ ಕೊಟ್ಟು ಖಾತೆ ಮಾಡಿಸಿಕೊಂಡಿದ್ದೇವೆ ಎಂದರೆ ನಿಜ. ಪ್ರತಿವಾದಿ ಸದರಿ ಡ ನಂ.2438 ಆದೇಶವನ್ನು ಪ್ರಶ್ನೆ ಮಾಡಿ ಎಸಿ ನ್ಯಾಯಾಲಯದಲ್ಲಿ ಮೇಲ್ಮನವಿ ದಾಖಲು ಮಾಡಿದ್ದು ಎಸಿ ಆದೇಶದಂತೆ ಡ ನಂಬರು ರದ್ದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಎಸಿ ಆದೇಶದ ವಿರುದ್ದ ಮೇಲ್ಮನವಿ ಸಲ್ಲಿಸಿದ್ದು ಅದು ವಜಾ ಆಯಿತು ಎಂದರೆ ನನಗೆ ಗೊತ್ತಿಲ್ಲ.

4. ರಂಗಪ್ಪನಿಗೆ ವಯಸ್ಸಾಗಿದ್ದು ಕಣ್ಣು ಕಾಣುವುದಿಲ್ಲ, ಅಡ್ಡಾಡಲು ಆಗುವುದಿಲ್ಲ ಎಂದರೆ ಸಾಕ್ಷಿಯೂ ಹೊಲಕ್ಕೆ ಹೋಗುತ್ತಾನೆ ಆದರೆ ನ್ಯಾಯಾಲಯಕ್ಕೆ ಬರಲು ಕಾಣುವುದಿಲ್ಲ ಎಂದು ಹೇಳುತ್ತಾರೆ. ನಾವು ಒಂದು ಮಾತನಾಡಿದರೆ ರಂಗಪ್ಪ ಬೇರೆ ಇನ್ನೇನೋ ಹೇಳುತ್ತಾನೆ ಎಂದರೆ ಸರಿಯಲ್ಲ. ಡ ನಂ. 2438 ರದ್ದಾಗಿದ್ದರೂ ಸಹ ಇವತ್ತಿಗೂ ಉತಾರದಲ್ಲಿ ನಮ್ಮ ಹೆಸರನ್ನು ಮುಂದುವರೆಸಿಕೊಂಡು ಬರುತ್ತಿದ್ದೇವೆ ಎಂದರೆ ಸರಿ. ಪ್ರತಿವಾದಿಗೆ ವಯಸ್ಸಾಗಿರುವುದನ್ನು ದುರುಪಯೋಗಪಡಿಸಿಕೊಂಡು ರೆವಿನ್ಯೂ ಅಧಿಕಾರಿಯ ಜೊತೆ ಮಿಲಾಪಿಯಾಗಿ ಹೆಸರಿನಲ್ಲಿ ಖಾತೆಗಳನ್ನು ಮುಂದುವರೆಸಿಕೊಂಡು ಬರುತ್ತಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಅಜ್ಜನ ಕಾಲದಿಂದಲೂ ಪ್ರತಿವಾದಿ ರಂಗಪ್ಪನನ್ನು ಆಸ್ತಿಯಲ್ಲಿ ಹಿಸ್ಸೆಕೊಡು ಎಂದು ಕೇಳಿಕೊಂಡು ಬರುತ್ತಿದ್ದರು ಸಹ ನಮಗೆ ಆಸ್ತಿಯಲ್ಲಿ ಹಿಸ್ಸೆ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಎರಡು ಆಸ್ತಿಗಳು ನನಗೆ ಸೇರಿದ ಆಸ್ತಿಗಳು ಎಂದು ಹಿಂದಿನಿಂದಲೂ ಹೇಳಿಕೊಂಡು ಬರುತ್ತಿದ್ದಾನೆ ಎಂದರೆ ಅದಕ್ಕೆ ನಾನು ದಾವೆಯನ್ನು ಹೂಡಿದ್ದೇನೆ ಎಂದು ಹೇಳುತ್ತಾರೆ.

5. ದಿನಾಂಕ 25-08-2021 ರಂದು ಸರ್ವೆ ನಂ.104/10 ರಲ್ಲಿ 3 ಎಕರೆ 30 ಗುಂಟೆ ಆಸ್ತಿಯನ್ನು ಕೊಟ್ರೇಶ ಶಿವಾನಂದ ಬಣಕಾರ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಮಾರಾಟ ಮಾಡಿದ್ದ ವಿಚಾರವಾಗಿ ನಾವು ತಹಶೀಲ್ದಾರ ಬಳಿ ತಕರಾರು ಹಾಕಿದ್ದೇವೆ ಎಂದರೆ ಇಲ್ಲ. ಆ ತಕರಾರಿನ ಮೇಲೆ ತಹಶೀಲ್ದಾರ ನ್ಯಾಯಾಲಯದಲ್ಲಿ ಕೇಸು ನಡೆದಿತ್ತು ಎಂದರೆ ನಿಜ. ಸಾಕ್ಷಿಯೂ ಮಾರಾಟ ಮಾಡಿದ್ದು ನಿಜ ಎಂದು ಹೇಳುತ್ತಾನೆ. ಅವನು ಸದರಿ ಆಸ್ತಿಯನ್ನು ಮಾರಾಟ ಮಾಡಿದ ನಂತರ ನಾನು ದಿನಾಂಕ 27-09-2021 ರಂದು ಈ ದಾವೆಯನ್ನು ಹಾಕಿರುತ್ತೇನೆ ಎಂದರೆ ನಿಜ. ಆ ಸದರಿ ದಾವೆಯಲ್ಲಿ ಆಸ್ತಿಗಳನ್ನು ಮಾರಾಟ

ಮಾಡಬಾರದು ಎಂದು ಏಕಪಕ್ಷೀಯ ನಿರ್ಭಂಧಕ ಆದೇಶ ಕೇಳಿ ಅರ್ಜಿ ಸಲ್ಲಿಸಿದ್ದೇನು ಎಂದರೆ ನಿಜ. ನಾನು ದಾವೆಯನ್ನು ಸಲ್ಲಿಸುವುದಕ್ಕಿಂತ ಪೂರ್ವದಲ್ಲಿ ಪ್ರತಿವಾದಿ ಸದರಿ ಆಸ್ತಿಯನ್ನು ಮಾರಾಟ ಮಾಡಿದ್ದ ಎಂದರೆ ನಿಜ.

6. ನ್ಯಾಯಾಲಯದ ಆದೇಶ ಪಡೆದುಕೊಂಡು ಖರೀದಿದಾರರಿಗೆ ಈಗಲೂ ಸಹ ಖಾತೆ ಮಾಡದಂತೆ ತಹಶೀಲ್ದಾರ ಕಚೇರಿಯಲ್ಲಿ ತಕರಾರು ಹಾಕಿದ್ದೇವೆ ಎಂದರೆ ನಿಜ. ಸರ್ವೆ ನಂ.104/10 ರಲ್ಲಿ 6 ಎಕರೆ 6 ಗುಂಟೆ ಪೈಕಿ 2 ಗುಂಟೆ 20 ಗುಂಟೆ ಆಸ್ತಿಯನ್ನು ಹನುಮಂತಪ್ಪ ಬಣಕಾರ ಎಂಬುವವರಿಗೆ ಪ್ರತಿವಾದಿ ಮಾರಾಟ ಮಾಡಿದ್ದಾನೆ ಎಂದರೆ ನಿಜ. ಹನುಮಂತಪ್ಪ ಬಣಕಾರ ಹಾಗೂ ಕೊಟ್ರೇಶ ಶಿವಾನಂದ ಬಣಕಾರ ರವರಿಗೆ ಆ ಎರಡು ಆಸ್ತಿಗಳನ್ನು ಮಾರಾಟ ಮಾಡಿರುವ ವಿಚಾರಗಳನ್ನು ಈ ದಾವೆಯಲ್ಲಿ ಹೇಳಿಲ್ಲ ಎಂದರೆ ನಿಜ. ಸರ್ವೆ ನಂ.104/10 ರಲ್ಲಿ 6 ಎಕರೆ 6 ಗುಂಟೆ ಪೈಕಿ ಈಗ ಎಷ್ಟು ಉಳಿದಿದೆ ಎಂದರೆ 3 ಎಕರೆ 30 ಗುಂಟೆ ಇದೆ ಎಂದು ಹೇಳುತ್ತಾರೆ.

7. ಸರ್ವೆ ನಂ.104/10 ರಲ್ಲಿ 6 ಎಕರೆ 6 ಗುಂಟೆ ಪೈಕಿ ರಂಗಪ್ಪನಿಗೆ ಸೇರಿದ ಆಸ್ತಿಗಳು ಉಳಿದಿಲ್ಲ ಎಂದರೆ ಆಸ್ತಿ ಇರುವುದಕ್ಕೆ ನಾನು ಕೇಸು ಹಾಕಿದ್ದೇನೆ. ಪ್ರತಿವಾದಿಯಿಂದ ಆಸ್ತಿಗಳನ್ನು ಖರೀದಿ ಮಾಡಿರುವಂತಹ ವ್ಯಕ್ತಿಗಳು ಆ ಆಸ್ತಿಗಳ ಕಬ್ಜಾ ವಹಿವಾಟಿನಲ್ಲಿದ್ದಾರೆ ಎಂದರೆ ಹನುಮಂತಪ್ಪ ಬಣಕಾರ ಖರೀದಿ ಮಾಡಿರುವ ಆಸ್ತಿಯಲ್ಲಿ ಕಬ್ಜಾ ಇದ್ದಾನೆ. ಶಿವಾನಂದ ಕೋಟ್ರೇಶ ಬಣಕಾರ ರವರು ಕಬ್ಜಾ ದಲ್ಲಿ ಇರುವುದಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂ.104/10 ರಲ್ಲಿ 6 ಎಕರೆ 6 ಗುಂಟೆ ಪೂರ್ತಿ ಮಾರಾಟ ಮಾಡಿದ್ದರೂ ಸಹ ಸತ್ಯಾಂಶವನ್ನು ಮುಚ್ಚಿಟ್ಟು ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಮೇಲ್ಕಂಡ ವಿಚಾರ ಗೊತ್ತಿದ್ದರೂ ಸಹ ನಾನು ಈ ಕೇಸಿನಲ್ಲಿ ಪಾರ್ಟಿಗಳನ್ನಾಗಿ ಮಾಡಿಲ್ಲ ಎಂದರೆ ನಿಜ. ಮೇಲ್ಕಂಡ ಎರಡು ಆಸ್ತಿಗಳು ಹಿರಿಯರಿಂದ ಬಂದ ಆಸ್ತಿಗಳು ಅಲ್ಲ ಪ್ರತಿವಾದಿಗೆ ಸೇರಿದಂತಹ ಆಸ್ತಿಗಳು ಸೇರಿದ್ದಂತಹ ಆಸ್ತಿಗಳು ಎಂದರೆ ಸರಿಯಲ್ಲ.

8. ನನ್ನ ತಾಯಿ ಮೋಟೆಬೆನ್ನೂರು ಗ್ರಾಮದವರು. ನನ್ನ ತಂದೆ ದುಡಿಯಲು ಶಿವಮೊಗ್ಗ, ಮಂಗಳೂರು ಈಕಡೆ ಹೋಗುತ್ತಿದ್ದರು. ನನ್ನ ತಂದೆ ವಯಸ್ಸಿಗೆ ಬಂದ ನಂತರ ಹೂಲಿಕಟ್ಟೆ ಗ್ರಾಮದಲ್ಲಿ ಯಾವತ್ತೂ ವಾಸವಾಗಿಲ್ಲ ಎಂದರೆ ಸರಿಯಲ್ಲ. ಮೇಲ್ಕಂಡ ಎರಡೂ ಆಸ್ತಿಗಳು ನಮ್ಮ ಕುಟುಂಬದ ಹಿರಿಯರಿಂದ ಬಂದಂತಹ ಆಸ್ತಿಗಳಲ್ಲ, ಹೀಗಾಗಿ ಸದರಿ ಆಸ್ತಿಗಳಲ್ಲಿ ನನಗೆ ಯಾವುದೇ ಹಿಸ್ಸೆಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಡ ನಂಬರು ರದ್ದಾಗಿದ್ದರೂ ಸಹ ನಮ್ಮ ಹೆಸರಿನಲ್ಲಿ ಮುಂದುವರೆದಿರುವ ಖಾತೆಯ ಆರ್ ಟಿ ಸಿ ಗಳನ್ನು ತೋರಿಸಿ ಈ

ದಾವೆಯನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನಗೆ ದಾವಾ ಆಸ್ತಿ 104/10 ಮತ್ತು 51/2 ರಲ್ಲಿ ಯಾವುದೇ ರೀತಿಯ ಹಿಸ್ಸೆಗಳು ಇರುವುದಿಲ್ಲ ಹಾಗೂ ನಾನು ಸಾಮೂಹಿಕ ಕಬ್ಜಾದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ತಾಲುಕ್ಕು ಆಫೀಸ್ ಮತ್ತು ಲ್ಯಾಂಡ್ ಟ್ರಿಬುನಲ್ ನಲ್ಲಿ ಎರಡೂ ಆಸ್ತಿಗಳ ಸಂಬಂದ ನಡುವೆ ಯಾರ ಯಾರ ನಡುವೆ ಕೇಸು ನಡೆಯಿತು ಎಂದರೆ ನನಗೆ ಗೊತ್ತಿಲ್ಲ. ನಾನು ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
(ಬಿ.ಸಿದ್ದರಾಜು)
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.